(ಈ ಹಂತದಲ್ಲಿ ಮಾನ್ಯ ಸದಸ್ಯರೊಂದಿಗೆ ಬಿಜೆಪಿ ಸದಸ್ಯರು ಕೂಡ ಸಭಾತ್ಯಾಗ ಮಾಡಿದರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಉತ್ತರ ಮುಗಿದಿದ್ದರೆ ಇನ್ನೊಂದು ವಿಚಾರ ಹೇಳಬೇಕಾಗಿದೆ. ಈಗಾಗಲೇ ನಾನು ರಿಲೆವೆಂಟ್ ಪಾಯಿಂಟ್ ತಮ್ಮ ಮುಂದೆ ಇಟ್ಟಿದ್ದೇವೆ. ಅದೇನೆಂದರೆ ನೀವು ವಕೀಲರಿಗೆ ಕೊಟ್ಟಂಥ ಡ್ರಾಫ್ಟ್ ಏನು? ಸುಪ್ರೀಂ ಕೋರ್ಟ್ ಮುಂದೆ ಅಟಾರ್ನಿ ಜನರಲ್ ಕೊಡುವಂಥ ಡ್ರಾಫ್ಟ್ ಒಪ್ಪಿಕೊಳ್ಳಿ ಎಂದು ಹೇಳಿದ್ದೀರಾ ಅಥವಾ ಇಲ್ಲವಾ? ಸೆಕ್ಷನ್ 6(ಎ) ಕೆಳಗೆ ಒಂದು ನೋಟಿಫಿಕೇಷನ್ ಇಶ್ಯೂ ಮಾಡಬೇಕು ಅಥವಾ ಒಂದು ಸ್ಕೀಮ್ ತಯಾರು ಆಗಬೇಕಾಗಿದೆ, ನಿಮ್ಮ ಸ್ಕೀಮ್ ಇಲ್ಲದೇ ಅಥವಾ ನಿಮ್ಮ ಒಪ್ಪಿಗೆ ಇಲ್ಲದೆ, ನಿಮ್ಮ ವಕೀಲರು ಸುಪ್ರೀಂ ಕೋರ್ಟ್‌ನ ಮುಂದೆ ಹೇಳುವುದಕ್ಕೆ ಸಾಧ್ಯವಿಲ್ಲ. ತಾವು ಒಂದು ವಿಷಯ ಹೇಳಿದಿರಿ, ನಾವು ಹೇಳದೇ ಇರತಕ್ಕಂಥ ವಿಷಯವನ್ನು ನಮ್ಮ ಬಾಯಿಯಲ್ಲಿ ಹಾಕಿ ಸುಪ್ರೀಂ ಕೋರ್ಟ್ ಈ ರೀತಿ ಹೇಳಿದೆ ಎಂದರೆ ಏನು ಇದರ ಅರ್ಥ? ಮಾನ್ಯ ಮೊಯ್ಲಿಯವರು ಹೇಳಿದಾಗೆ ಇವತ್ತು ಸುಪ್ರೀಂ ಕೋರ್ಟ್‌ನಲ್ಲಿ ಕಂಟೆಮ್ಪ್ಟ್ ಕೇಸ್ ಬರುತ್ತದೆ, ನಾವು ಹೇಳದೆ ಇರುವುದನ್ನು ನೀವು ಅಲ್ಲಿ ಬರೆದಿದ್ದೀರಿ ಎನ್ನತಕ್ಕಂಥ ಮಾತು ಬರುತ್ತದೆ, ಅಥವಾ ಜಡ್ಜ್‌ಮೆಂಟ್ ಆರ್ಡರ್‌ನಲ್ಲಿ ಕೊಟ್ಟಿದ್ದೀರಾ, ಅದನ್ನು ನೀವು ಸುಪ್ರೀಂ ಕೋರ್ಟ್‌ಗೆ ಹೇಳಿಲ್ಲ, ಕ್ಲಾರಿಫಿಕೇಷನ್ ಏನಾದರೂ ಕೊಟ್ಟಿದ್ದೀರಾ? ಏಕೆಂದರೆ ಅದು ಆರ್ಡರ್ ಸೀಟ್‌ನಲ್ಲಿ 9.4.97ಕ್ಕೆ ಬರೆದಿದ್ದು ಮೇ, ಜೂನ್, ಜುಲೈ ಅಂದರೆ, 3 ತಿಂಗಳು ಆಯಿತು. ಅದಕ್ಕಿಂತ ಮುಂಚಿತವಾಗಿ, ಅಂದರೆ ಮಧ್ಯಭಾಗದಲ್ಲಿ 17ನೇ ಜುಲೈನಲ್ಲಿ ಒಂದು ಕೇಸ್ ಇತ್ತು, ಅದಕ್ಕೇನಾದರೂ ಅಫಿಡೆವಿಟ್ ಕೊಟ್ಟು ಕ್ಲಾರೀಫಿಕೇಷನ್ ಕೇಳಿದ್ದೀರಾ? ಅಥವಾ ಏನಾದರೂ ಸ್ಪೆಷಲ್ ಅಪ್ಲಿಕೇಷನ್ ಹಾಕಿ ಇಂತಹ ಪ್ರೊಸೇಡಿಂಗ್ಸ್‌ನಲ್ಲಿ ಏನು ಬಂದಿದೆ ಅದು ಸರಿಯಲ್ಲ ಎನ್ನತಕ್ಕಂಥದ್ದು ಹೇಳಿದಿರಾ? ಅದನ್ನು ಕೂಡ ಮಾಡಿಲ್ಲ, ಇದರ ಅರ್ಥ ಏನೆಂದರೆ ಪ್ರತಿಯೊಂದು ಸುಳ್ಳನ್ನು ಮುಚ್ಚಿಡುವುದಕ್ಕಾ[illegible]ದು ಸುಳ್ಳು ಹೇಳಿ ತಪ್ಪು ದಾರಿಗೆ ಎಳೆಯುವುದನ್ನು ಮಾಡಿದ್ದೀರಿ.

3.40 ಪಿ.ಎಂ

ನಾವು ಪದೇ ಪದೇ ಪ್ರಸ್ತಾಪ ಮಾಡುತ್ತಿದ್ದೇವೆ. ಅಂದಿನ ಪ್ರಧಾನ ಮಂತ್ರಿಗಳಿಗೂ ನಾನು ಕೇಳಿದ್ದೆ. ಅಟಾರ್ನಿ ಜನರಲ್‌ರವರು ತಾನಾಗಿಯೇ ಯಾವ ಕಾರಣಕ್ಕಾಗಿ ಏಕೆ ಕೊಟ್ಟ. ಅದಕ್ಕೇನು ಕಾರಣ? ಅಟಾರ್ನಿ ಜನರಲ್, ಅಶೋಕ್ ದೇಸಾಯಿಯವರು ಹೇಳಿದಮೇಲೆ, ನಮ್ಮ ಅನಿಲ್ ದಿವಾನ್‌ರವರು, ನಿಮ್ಮ ವಕೀಲರು, ನಿಮ್ಮ ರಾಜ್ಯದವರು, ನಿಮ್ಮ ಕನ್‌ಸೆಂಟ್ ಇಲ್ಲದೇ, ನಿಮ್ಮ ಬ್ರೀಪಿಂಗ್ ಇಲ್ಲದೇ ಅವರ ಮಾತಿಗೆ ಸಹಮತ ಹೇಗೆ ಕೊಟ್ಟರು? ಈ ಪ್ರಶ್ನೆಯನ್ನು ನಾವು ನೇರವಾಗಿ ಕೇಳುತ್ತಿದ್ದೇವೆ. ಇದನ್ನು ನೀವು ಅವಾಯ್ಡ್ ಮಾಡುತ್ತಿದ್ದೀರಿ. ಎರಡನೆಯದೇನೆಂದರೆ, ತಾವೇ ಹೇಳಿದಹಾಗೆ ದಿನಾಂಕ : 1.1.96ರಲ್ಲಿ ಪಿ.ವಿ. ನರಸಿಂಹರಾವರವರು, ಶ್ರೀಮಾನ ದೇವೇಗೌಡರಿಗೆ ಪತ್ರವನ್ನು ಬರೆದಿದ್ದಾರೆ. ಇದರಲ್ಲಿ ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಪ್ಯಾರಾ (9) ಮತ್ತು 10ರಲ್ಲಿ ಹೇಳಿರುವುದನ್ನು ತಮ್ಮ ಗಮನಕ್ಕೆ ತರುತ್ತೇನೆ. para 9 :

``In this connection I may add that for some time there have been suggestions that policy guidelines should have been evolved by the Union Government for sharing of inter-state river waters".